# ಕಲಿಕೆಗಾಗಿ ಹೊಸಹಾದಿ ತೆರೆಯೋಣ

# ಮುನ್ನಡೆಯುವ

## ಕನ್ನಡ

## KANNADA

**ತರಗತಿ - 10**

**State Council of Educational and Research and Training (SCERT), Kerala.**

## ಕಲಿಕೆಗಾಗಿ ಹೊಸಹಾದಿ ತೆರೆಯೋಣ

## ಮುನ್ನಡೆಯುವ

### ಮುನ್ನುಡಿ

ಮಾರಕವಾದ ಕೋವಿಡ್ ಮಹಾಮಾರಿಯ ಅಲೆಯಿಂದ 2019 ರಿಂದ 2021 ರ ವರೆಗೆ ವಿದ್ಯಾರ್ಥಿಗಳಿಗೆ ಪೂರ್ಣ ರೂಪದಲ್ಲಿ ನೇರವಾದ ಕಲಿಕಾನುಭವಗಳು ಲಭಿಸದಿರುವುದರಿಂದ ಅವರ ಕಲಿಕಾ ಗುಣಮಟ್ಟದಲ್ಲಿ ಹಿಂಜರಿಕೆ ಉಂಟಾಗಿರುವುದಾಗಿ 2022 ರ ಕಾಲುವಾರ್ಷಿಕ ಮೌಲ್ಯಮಾಪನದಿಂದ ಲಭಿಸಿದ ಫಲಿತಾಂಶಗಳ ವಿಶ್ಲೇಷಣೆ ಮತ್ತು ಅಧ್ಯಾಪಕರ ಅನುಭವಗಳಿಂದ ವೇದ್ಯವಾಗಿರುತ್ತದೆ. ಮೊದಲಿನ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ಲಭಿಸಬೇಕಾಗಿದ್ದ ಕೆಲವು ಆಶಯಗಳನ್ನು ಆರ್ಜಿಸುವುದಕ್ಕೂ ಪ್ರಸ್ತುತ ತರಗತಿಯ ಕಲಿಕೆಯನ್ನು ಮತ್ತಷ್ಟು ಉತ್ತಮಗೊಳಿಸುವುದಕ್ಕೂ ಸಹಕಾರಿಯಾಗುವ ಒಂದು ಕಲಿಕಾ ಸಹಾಯಿಯನ್ನು ತಯಾರಿಸಿ ಕೊಡಲಾಗಿದೆ. ಇದರಲ್ಲಿ ವಿದ್ಯಾರ್ಥಿಗೆ ನಷ್ಟವಾದ ಕಲಿಕಾನುಭವಗಳ ಕುರಿತಾದ ವಿವರಗಳನ್ನು ಮತ್ತು ಅದನ್ನು ಪರಿಹರಿಸುವ ಮಾರ್ಗೋಪಾಯಗಳನ್ನು ಸೂಚಿಸಲಾಗಿದೆ. ವಿದ್ಯಾರ್ಥಿಗಳು ಈ ಕಲಿಕಾ ಸಹಾಯಿಯ ನೆರವಿನಿಂದ ಸ್ವಯಂ ಕಲಿಕೆ ಮತ್ತು ಅಧ್ಯಾಪಕರ ಸಹಾಯದಿಂದ ನಷ್ಟವಾದ ಕಲಿಕಾನುಭವಗಳನ್ನು ಪುನಃ ಆರ್ಜಿಸಿಕೊಂಡು ಆತ್ಮವಿಶ್ವಾಸದಿಂದ ಕಲಿಕೆಯಲ್ಲಿ ಮುನ್ನಡೆಯುವಂತಾಗಲಿ ಎನ್ನುವ ಶುಭ ಹಾರೈಕೆ.

**ನಿರ್ದೇಶಕರು,**

**SCERT, ಕೇರಳ**

ಅಧ್ಯಾಪಕ ಬಂಧುಗಳೆ / ವಿದ್ಯಾರ್ಥಿಗಳೆ,

ಕೋವಿಡ್ ಮಹಾಮಾರಿ ತನ್ನ ಕಬಂಧ ಬಾಹುಗಳನ್ನು ಜಗತ್ತಿನ ಪ್ರತಿಯೊಂದರ ಮೇಲೆಯೂ ಚಾಚಿ ತನ್ನ ಗಾಢ ಪರಿಣಾಮವನ್ನು ಬೀರಿತು. ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ, ಕಲಿಕೆಯ ಸಾಮರ್ಥ್ಯ ಮತ್ತು ಏಕಾಗ್ರತೆಯ ಕುಸಿತಕ್ಕೂ ಇದು ಕಾರಣವಾಯಿತು.

ಆದುದರಿಂದ ಕೇರಳದ ವಿದ್ಯಾರ್ಥಿಗಳ ಶಿಕ್ಷಣದ ಗುಣಮಟ್ಟ ಮತ್ತು ಕಲಿಕೆಯ ಸಾಮರ್ಥ್ಯದ ನೈಜ ವಿಚಾರಗಳನ್ನು ತಿಳಿಯಲು 2022-23 ಅಧ್ಯಯನ ವರ್ಷದ ವಿದ್ಯಾರ್ಥಿಗಳ ಕಾಲುವಾರ್ಷಿಕ ಮೌಲ್ಯಮಾಪನದ ಉತ್ತರ ಪತ್ರಿಕೆಗಳ ವೈಜ್ಞಾನಿಕ ವಿಶ್ಲೇಷಣೆ ನಡೆಸಲು SCERT ನೇತೃತ್ವದಲ್ಲಿ ತೀರ್ಮಾನಿಸಲಾಗಿದೆ.

ವಿದ್ಯಾರ್ಥಿಗಳ ಆಲಸ್ಯವನ್ನು ದೂರಮಾಡಿ, ಶಿಕ್ಷಣದ ಮಹತ್ವವನ್ನು ಮನವರಿಕೆ ಮಾಡಿ ಅವರ ಮಸುಕಾದ ಜ್ಞಾನವನ್ನು ಪ್ರಜ್ವಲಿಸುವಂತೆ ಮಾಡುವ ಜವಾಬ್ದಾರಿ ಅಧ್ಯಾಪಕರಾದ ನಮ್ಮ ಮೇಲಿದೆ. ಅದಕ್ಕಾಗಿ ತರಗತಿಯಲ್ಲಿ ಕ್ರಿಯಾತ್ಮಕವಾದ ಬೋಧನೆ–ಕಲಿಕೆಯ ಚಟುವಟಿಕೆಗಳನ್ನು ಆವಿಷ್ಕರಿಸಲು ಮತ್ತು ಸಮರ್ಪಣಾ ಭಾವದಿಂದ ಅವುಗಳನ್ನು ಅನುಷ್ಠಾನಗೊಳಿಸಲು ನಾವು ಸಿದ್ಧರಾಗೋಣ ಎಂದು ಹಾರೈಸೋಣ.

**10 ನೇ ತರಗತಿಯ ಮೌಲ್ಯಮಾಪನ ವಿಶ್ಲೇಷಣೆಗೆ ಒಳಪಡಿಸಿದ ಕನ್ನಡ ಉತ್ತರ ಪತ್ರಿಕೆಗಳು-100**

| | | |
|---|---|---|
| A+ ಗ್ರೇಡ್ ಲಭಿಸಿದವರು | = 14 | 14% |
| A ಗ್ರೇಡ್ ಲಭಿಸಿದವರು | = 11 | 11% |
| B+ ಗ್ರೇಡ್ ಲಭಿಸಿದವರು | = 13 | 13% |
| B ಗ್ರೇಡ್ ಲಭಿಸಿದವರು | = 14 | 14% |
| C+ ಗ್ರೇಡ್ ಲಭಿಸಿದವರು | = 2 | 2% |
| C ಗ್ರೇಡ್ ಲಭಿಸಿದವರು | = 10 | 10% |
| D+ ಗ್ರೇಡ್ ಲಭಿಸಿದವರು | = 8 | 8% |
| BELOW | = 28 | 28% |

# ತರಗತಿ : 10

## ಪತ್ರಿಕೆ- ಕನ್ನಡ AT

**1 ರಿಂದ 3 ನೆ ಪ್ರಶ್ನೆ**

**ಉತ್ತರದ ಬಹು ಆಯ್ಕೆಯ ಪ್ರಶ್ನೆ.**

- ಇದು ವಿದ್ಯಾರ್ಥಿಯ ಜ್ಞಾನ, ಪೂರ್ವಜ್ಞಾನವನ್ನು ತಿಳಿಯುವ ಪ್ರಶ್ನೆ.
- 2 ನೆಯ ಪ್ರಶ್ನೆ-ವಿಗ್ರಹ ವಾಕ್ಯ ಬರೆಯುವುದು.
- ಹತ್ತನೆಯ ತರಗತಿಯ ವಿದ್ಯಾರ್ಥಿಗಳಿಗೆ ವಿಗ್ರಹವಾಕ್ಯಕ್ಕೆ ಸಮಸ್ತ ಪದಗಳನ್ನು ಕೊಡುವಾಗ ತರಗತಿಯ ಮಟ್ಟಕ್ಕೆ ಸರಿಹೊಂದುವ ಪದಗಳನ್ನು ಕೊಡುವುದು ಸೂಕ್ತ. ತೀರ ಸರಳವಾದ ಪದಗಳನ್ನು ಕೊಡುವುದು ಸೂಕ್ತವಲ್ಲ.

**ಪ್ರಶ್ನೆ-5**

**ಕೊಟ್ಟಿರುವ ಸಾಲುಗಳಲ್ಲಿನ ಸಂದೇಶಗಳನ್ನು ಗುರುತಿಸಿ ಬರೆಯುವುದು.**

**ಭಾಷಾ ಅಂಶಗಳು ಮತ್ತು ವ್ಯಾಕರಣ ಅಂಶಗಳು:**

ಸ್ವತಂತ್ರವಾದ ಬರವಣಿಗೆ ಅಪೇಕ್ಷಿಸುವ ಚಟುವಟಿಕೆ. ಇಲ್ಲಿ ಪದ ಸಂಪತ್ತು, ವಾಕ್ಯ ರಚನೆ, ಕಾಗುಣಿತ, ಒತ್ತಕ್ಷರ, ಹೃಸ್ವ-ದೀರ್ಘ, ಅಲ್ಪಪ್ರಾಣ ಮಹಾಪ್ರಾಣಗಳ ದೋಷಗಳು ಕಂಡುಬರುತ್ತದೆ. ತರಗತಿಯಲ್ಲಿ ಬರವಣಿಗೆಯ ತಿದ್ದುವಿಕೆ (EDITING) ಸರಿಯಾದ ರೀತಿಯಲ್ಲಿ ನಡೆಯದಿರುವುದು ಕಾರಣವಾಗಿರಬಹುದು.

**ಆಶಯಗ್ರಹಣ:**

ವಚನದ ಮೇಲ್ನೋಟದ ಆಶಯ, ಅದರ ಗೂಡಾರ್ಥವನ್ನು ಬರೆದಿರುವ ವಿದ್ಯಾರ್ಥಿಗಳೂ ಅದು ನೀಡುವ ಸಂದೇಶವನ್ನು ಬರೆದಿರುವುದಿಲ್ಲ. ಅರ್ಥಾತ್ ಅವರ ಸ್ವತಂತ್ರ ಚಿಂತನೆ, ನಿಗಮನಗಳು ಪ್ರಕಟಪಡಿಸುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ.

**ಪ್ರಶ್ನೆ-7**

**ವಾಕ್ಯದಲ್ಲಿನ ವಿಶೇಷತೆ ಬರೆಯುವುದು.**

**ಆಶಯ ಗ್ರಹಣ:**

ಕವಿತೆಯ ಆಶಯಗ್ರಹಣವಾದಂತೆ ಕಾಣುವುದಿಲ್ಲ. ಆಶಯಗ್ರಹಣ ಸಾಧ್ಯವಾಗಬೇಕಾದರೆ ಬಳಸಲಾದ ಪದಗಳ ಅರ್ಥ, ಅರ್ಥ ವಿಶೇಷತೆ ಗೊತ್ತಿರಬೇಕು. ಮಗುವಿನ ಕಲ್ಪನಾ ಸಾಮರ್ಥ್ಯ ವಿಸ್ತಾರವಾಗಿರಬೇಕು. ಮಗುವಿಗೆ ತುಲನೆ ಮಾಡುವ ಸಾಮರ್ಥ್ಯವಿರಬೇಕು. ಇವುಗಳ ಕೊರತೆಗಳನ್ನು ಕಾಣಬಹುದು.

**ಪ್ರಶ್ನೆ-8**

**ಆಸ್ವಾದನಾ ಟಿಪ್ಪಣಿ**

ಭಾಷಾಪರವಾದ, ವ್ಯಾಕರಣಪರವಾದ ಅಂಶಗಳು : C ಮತ್ತು C+ ನಿಂದ ಮೇಲಿರುವ ವಿದ್ಯಾರ್ಥಿಗಳಿಗೂ ಆಶಯಗ್ರಹಣವಾದ ಅಂಶಗಳನ್ನು ಲಿಖಿತವಾಗಿ ಪ್ರಕಟಿಸುವಾಗ ಒತ್ತಕ್ಷರಗಳೂ, ಅಕ್ಷರಗಳ ಪಲ್ಲಟ, ಪದಸಂಪತ್ತಿನ ಕೊರತೆಯೆ ಮೊದಲಾದ ಅಂಶಗಳನ್ನು ಕಾಣಬಹುದು.

**ವ್ಯವಹಾರ ರೂಪದ ಸ್ವರೂಪ**

ಆಸ್ವಾದನಾ ಟಿಪ್ಪಣಿಯ ಮೌಲ್ಯಮಾಪನ ಸೂಚಕಗಳಾದ - ಪ್ರಧಾನ ಆಶಯ ಪ್ರಕಟಣೆ, ವಿಶೇಷ ಪದ, ಪದ ಸಮೂಹಗಳ ಗುರುತಿಸುವಿಕೆ, ಅವುಗಳ ಸ್ವಾರಸ್ಯ, ಒಳಾರ್ಥಗಳು, ರಾಗ, ತಾಳ, ಲಯ ಮೊದಲಾದ ಅಂಶಗಳ ಗುರುತಿಸುವಿಕೆಯನ್ನು B+ ನಿಂದ ಮೇಲಿರುವ ವಿದ್ಯಾರ್ಥಿಗಳು ಮಾಡಿರುತ್ತಾರೆ. ಕವಿ, ಕವಿತೆಗಳ ಉಲ್ಲೇಖಗಳು ಕಂಡುಬರುವುದಿಲ್ಲ. ನಿರಂತರವಾದ ಬರವಣಿಗೆ, ತಿದ್ದುವಿಕೆಯ ಕೊರತೆಗಳು ಕಾರಣವಿರಬಹುದು.

**ಆಸ್ವಾದನ ಅಂಶಗಳು:**

ಕೊಟ್ಟಿರುವ ಸಾಲುಗಳಲ್ಲಿನ ಸ್ವಾರಸ್ಯಕರವಾದ ಅಂಶಗಳ ಗುರುತಿಸುವಿಕೆ, ಒಳಾರ್ಥಗಳ ಬಗೆಗಿನ ತಿಳುವಳಿಕೆ, ರಾಗ, ತಾಳ, ಲಯಗಳು, ಹಾಡುವಿಕೆಯಂತಹ ಆಸ್ವಾದನೀಯ ಅಂಶಗಳ ಉಲ್ಲೇಖದ ಕೊರತೆಯಿದೆ.

**ಪ್ರಶ್ನೆ-9**

**ವಿಮರ್ಶಾ ಲೇಖನ**

**ಭಾಷಾ ಪರವಾದ ಮತ್ತು ವ್ಯಾಕರಣ ಪರವಾದ ಅಂಶಗಳು:**

ಇಲ್ಲಿಯೂ ವಿದ್ಯಾರ್ಥಿಗಳಲ್ಲಿ ಬರವಣಿಗೆಯ ಕೊರತೆಯ ದೋಷಗಳನ್ನು ಕಾಣಬಹುದು. ಓದು ಮತ್ತು ನಿರಂತರವಾದ ಬರವಣಿಗೆ ಕಡಿಮೆಯಾದ ಅನುಭವವನ್ನು ನೀಡುತ್ತದೆ.

**ವ್ಯವಹಾರ ರೂಪದ ಅಂಶಗಳು:**

- ವಿಮರ್ಶಾ ಬರವಣಿಗೆ ಹತ್ತನೆಯ ತರಗತಿಗೆ ಹೊಸದು. ಭಾಷಾ ವ್ಯವಹಾರ ಸ್ವರೂಪದ ಪರಿಚಯ ಅನಿವಾರ್ಯ.

- ಪ್ರಶ್ನೆಯಲ್ಲಿನ ವಿಚಾರದ ಸರಿಯಾದ ಅರ್ಥೈಸುವಿಕೆ, ಪಠ್ಯದಲ್ಲಿನ ಕಥಾಪಾತ್ರದ ವಿಚಾರವನ್ನು ಸ್ಥೂಲವಾಗಿ ತಿಳಿಯಪಡಿಸುವುದು, ಪಠ್ಯದಲ್ಲಿನ ಕಥಾಪಾತ್ರದ ಸ್ವಭಾವ ಮತ್ತು ನೈಜ ಸ್ವರೂಪದ ವೈರುದ್ಯಗಳ ವಿಶ್ಲೇಷಣೆ, ನಿಗಮನಗಳು ಬರಬೇಕು.

  B+ ಗಿಂತ ಮೇಲಿನ ವಿದ್ಯಾರ್ಥಿಗಳು ಬರೆದಿರುತ್ತಾರೆ.

**ಪ್ರಶ್ನೆ-11**

**ಹೋಲಿಸಿ ಬರೆಯುವುದು**

**ಭಾಷೆ ಮತ್ತು ವ್ಯಾಕರಣ ಅಂಶಗಳು**

- ಹತ್ತನೆಯ ತರಗತಿಯ ವಿದ್ಯಾರ್ಥಿಗಳ ಮಟ್ಟದ ಭಾಷಾ ಪ್ರೌಢಿಮೆ ಕಾಣುವುದಿಲ್ಲ.
- ವಾಕ್ಯ ರಚನೆ, ಭಾಷಾ ದೋಷಗಳನ್ನು ಕಾಣಬಹುದು.

**ಭಾಷಾ ವ್ಯವಹಾರ ರೂಪ:**

B+ ಗಿಂತ ಮೇಲಿರುವ ವಿದ್ಯಾರ್ಥಿಗಳು ಭಾಷಾ ವ್ಯವಹಾರ ರೂಪದ ಸ್ವರೂಪವನ್ನು ತಿಳಿದುಕೊಂಡಿರುತ್ತಾರೆ.

ಎರಡು ಕವನದ ಪ್ರಧಾನ ಆಶಯ, ಎರಡು ಭಾಗಗಳಲ್ಲಿನ ಆಶಯಗಳ ಸಮಾನತೆ, ಅವುಗಳು ನೀಡುವ ಸಂದೇಶ, ಭಿನ್ನವಾದ ಅಂಶಗಳಿದ್ದರೆ ಅವುಗಳ ಪ್ರಕಟಣೆ ಇಂತಹ ಅಂಶಗಳನ್ನು ವಿದ್ಯಾರ್ಥಿಗಳು ಪ್ರಕಟಪಡಿಸಿದ್ದಾರೆ.

**ಪ್ರಶ್ನೆ-12**

**ಪಾತ್ರ ಚಿತ್ರಣ**

8 ಮತ್ತು 9 ನೆಯ ತರಗತಿಗಳಲ್ಲಿ ಬರುವ ಭಾಷಾ ವ್ಯವಹಾರ ರೂಪವಾದುದರಿಂದ ಸರಾಸರಿ ವಿದ್ಯಾರ್ಥಿಗಳು ಬರೆದಿರುತ್ತಾರೆ.

**ಪ್ರಶ್ನೆ-13**

**ಲೇಖನ**

ಅವಲೋಕನಕ್ಕೆ ಒಳಪಡಿಸಿದ ಉತ್ತರ ಪತ್ರಿಕೆಗಳಲ್ಲಿ 90% ವಿದ್ಯಾರ್ಥಿಗಳು ಪ್ರಶ್ನೆಗಳಿಗೆ ಉತ್ತರ ಬರೆದಿರುವುದಿಲ್ಲ.

- ಈ ಚಟುವಟಿಕೆಗೆ ಉತ್ತರ ಬರೆಯಬೇಕಾದರೆ ವಿದ್ಯಾರ್ಥಿಯಲ್ಲಿ ಸ್ವತಂತ್ರ ಓದು, ಬರವಣಿಗೆ ಅನಿವಾರ್ಯ.
- ಪತ್ರಿಕೆಗಳಲ್ಲಿನ ಲೇಖನ, ಅಂಕಣ ಬರಹ ಮೊದಲಾದ ಲೇಖನ ಸಾಮಾಗ್ರಿಗಳ ಒದಗಿಸುವಿಕೆ.

- ವಿವಿಧ ವಿಚಾರಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು ಅವುಗಳ ಕುರಿತು ಲೇಖನ ಬರೆಯಿಸುವ ಚಟುವಟಿಕೆಗಳ ಕೊರತೆಗಳು ವಿದ್ಯಾರ್ಥಿಗಳು ಈ ಪ್ರಶ್ನೆಗೆ ಉತ್ತರ ಬರೆಯದಿರುವ ವಿಮುಖತೆಗೆ ಕಾರಣವಿರಬಹುದು.
- ಸೂಕ್ತವಾದ ಶೀರ್ಷಿಕೆ, ಪ್ರಧಾನ ಆಶಯಗಳು, ವಿಚಾರಗಳ ಕ್ರಮಾನುಗತವಾದ ನಿರಂತರತೆ, ಕಥೆಯ ಉತ್ತಮವಾದ ಮುಕ್ತಾಯವೇ ಮೊದಲಾದ ಅಂಶಗಳ ಕೊರತೆಗಳಿವೆ.

ಆದರೂ ವಿಶ್ಲೇಷಣೆಗೆ ಒಳಪಡಿಸಿದ ಉತ್ತರ ಪತ್ರಿಕೆಗಳಲ್ಲಿ 75% ವಿದ್ಯಾರ್ಥಿಗಳು ಈ ಪ್ರಶ್ನೆಗೆ ಉತ್ತರ ಬರೆದಿರುತ್ತಾರೆ, 50% ಬರಹಗಳು ಸರಾಸರಿ ಮಟ್ಟದಲ್ಲಿವೆ.

ವಿದ್ಯಾರ್ಥಿಗಳಲ್ಲಿ ಕಲಿಕಾ ಗುಣಮಟ್ಟವನ್ನು ಕಾಯ್ದುಕೊಂಡು ಅವರಲ್ಲಿ ಅಭಿವ್ಯಕ್ತಿ ಸಾಮರ್ಥ್ಯ ಮತ್ತು ಸೃಜನಶೀಲತೆಯನ್ನು ಬೆಳೆಸುವುದು ಭಾಷಾ ಸಂಬಂಧಿತವಾದ ಕಲಿಕೆಯಲ್ಲಿ ಮುಖ್ಯವಾಗುತ್ತದೆ. ವಿದ್ಯಾರ್ಥಿಗಳು ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತಕ್ಕೆ ತಲುಪುವಾಗ ಭಾಷಾ ಕಲಿಕೆಯ ಮೂಲಕ ಆ ಭಾಷೆಯನ್ನು ಸುಲಲಿತವಾಗಿ ಬಳಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು. ಭಾಷೆಯ ವಿಶೇಷತೆ, ವ್ಯಾಕರಣ, ವ್ಯವಹಾರ ರೂಪಗಳು, ಆಶಯ, ಸ್ವರೂಪ, ಆಸ್ವಾದನೆ ಇತ್ಯಾದಿಗಳನ್ನು ಸ್ಪಷ್ಟವಾಗಿ ತಿಳಿಯುವಂತಾಗಬೇಕು. ಅಕ್ಷರಗಳನ್ನು ತಪ್ಪಿಲ್ಲದಂತೆ ಬರೆಯುವ, ಉಚಿತವಾದ ವಾಕ್ಯ ರಚನೆಯನ್ನು ಮಾಡುವ, ಶಬ್ದ ಭಂಡಾರವನ್ನು ಬಳಸಿಕೊಳ್ಳುವ ಭಾಷಿಕ ಸಾಮರ್ಥ್ಯವನ್ನು ಗಳಿಸಿಕೊಳ್ಳಬೇಕು.

ಪ್ರೌಢಶಾಲಾ ಹಂತದಲ್ಲಿ ಕನ್ನಡ ಭಾಷಾ ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳು ಸಾಹಿತ್ಯ ರೂಪಗಳನ್ನು ಸ್ವತಂತ್ರವಾಗಿ ಓದಿ, ಅರ್ಥೈಸಿಕೊಂಡು ಅದರ ಆಶಯವನ್ನು ಗ್ರಹಿಸಿ, ಮೌಖಿಕವಾಗಿ ಮತ್ತು ಲಿಖಿತವಾಗಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗಬೇಕು. ವಿವಿಧ ವ್ಯವಹಾರ ರೂಪಗಳನ್ನು ಸಮರ್ಥವಾಗಿ ಸಂದರ್ಭೋಚಿತವಾಗಿ ಬಳಸಿಕೊಳ್ಳುವುದಕ್ಕೆ ಪ್ರಾಪ್ತರಾಗಬೇಕು. ವಿದ್ಯಾರ್ಥಿಗಳು ತಮ್ಮ ಭಾವನೆಗಳನ್ನು, ನಿಗಮನಗಳನ್ನು, ಚಿಂತನೆಗಳನ್ನು ವಿವಿಧ ಭಾಷಾ ವ್ಯವಹಾರ ರೂಪಗಳಲ್ಲಿ ಸೃಜನಾತ್ಮಕವಾಗಿ ಅಭಿವ್ಯಕ್ತಗೊಳಿಸಲು ಸಮರ್ಥರಾಗಬೇಕು.

ಕಳೆದೆರಡು ವರ್ಷಗಳಲ್ಲಿ ವಿದ್ಯಾರ್ಥಿಗಳು ವಿದ್ಯುನ್ಮಾನ ಮಾಧ್ಯಮಗಳ ಮೂಲಕ ಕಲಿಕಾ ಪ್ರಕ್ರಿಯೆಗೆ ಒಳಪಟ್ಟಿರುವುದರಿಂದ, ಪ್ರಸ್ತುತ ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ ತರಗತಿಯ ಕಲಿಕಾ ಮಟ್ಟವನ್ನು ತಲುಪಲು ವಿಫಲರಾಗಿರುವುದು ಗೋಚರವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಕಲಿಕಾ ಅಂತರ ಮತ್ತು ಕಲಿಕಾ ಗುಣಮಟ್ಟದ ಕುಸಿತ, ಭಾಷೆಯ ಬಳಕೆಯಲ್ಲಿ ಅಸಮರ್ಪಕತೆ ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಎಂಟು, ಒಂಬತ್ತು, ಮತ್ತು ಹತ್ತನೇ ತರಗತಿಯಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯುವ ವಿದ್ಯಾರ್ಥಿಗಳಲ್ಲಿ ಭಾಷಾ ಕಲಿಕೆಯಲ್ಲಿ ಉಂಟಾದ ಕಲಿಕಾ ಗುಣಮಟ್ಟದ ಕುಸಿತ ಮತ್ತು ದೋಷಗಳಿಗೆ ಕಾರಣಗಳನ್ನು ಕಂಡುಕೊಂಡು ಅದಕ್ಕೆ ಪರಿಹಾರವನ್ನು ಕಾಣುವ ಅನಿವಾರ್ಯತೆ ಎದುರಾಯಿತು.

ಈ ತರಗತಿಗಳಲ್ಲಿ ಕನ್ನಡ ಭಾಷೆಯನ್ನು ಕಲಿಯುವ ವಿದ್ಯಾರ್ಥಿಗಳ ಭಾಷಾ ಕಲಿಕೆಯ ಗುಣಮಟ್ಟದ ಕೊರತೆ ಮತ್ತು ಭಾಷಿಕ ದೋಷಗಳನ್ನು ಕಂಡುಕೊಳ್ಳಲು ಸೂಚಿತ ತರಗತಿಗಳ ಕಾಲು ವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳನ್ನು ಮತ್ತು ಉತ್ತರ ಪತ್ರಿಕೆಗಳನ್ನು ತರಗತಿವಾರು ವಿಶ್ಲೇಷಣೆಗೆ ಒಳಪಡಿಸಲಾಯಿತು. ವಿಶ್ಲೇಷಣೆ ನಡೆಸುವಾಗ ಗ್ರೇಡ್ ವಾರು ಮತ್ತು ಪ್ರಶ್ನಾನುಸಾರವಾಗಿ ಗಮನಿಸಲಾಗಿದೆ. ವಿಶ್ಲೇಷಣೆಯಲ್ಲಿ ಈ ಕೆಳಗಿನ ಅಂಶಗಳನ್ನು ಕಂಡುಕೊಳ್ಳಲಾಯಿತು.

- ಸಮರೂಪ ಅಕ್ಷರಗಳ ವ್ಯತ್ಯಾಸ ತಿಳಿಯದಿರುವುದು.
- ಉಚ್ಚಾರಣೆಯ ದೋಷ ಬರವಣಿಗೆಯಲ್ಲಿ ಕಂಡು ಬರುವುದು.
- ಹ್ರಸ್ವ -ದೀರ್ಘ ವ್ಯತ್ಯಾಸ ತಿಳಿಯದಿರುವುದು.
- ವಾಕ್ಯಾರಂಭದಲ್ಲಿ ಬಹುವಚನ- ಮುಕ್ತಾಯ ಏಕವಚನದಲ್ಲಿ.
- ಪತ್ರ ಬರವಣಿಗೆಯಲ್ಲಿ ಪತ್ರದ ಸ್ವರೂಪ ತಿಳಿಯದಿರುವುದು.
- ಖಾಸಗಿ ಪತ್ರ ಮತ್ತು ಔಪಚಾರಿಕ ಪತ್ರಗಳ ಕುರಿತಾದ ಸ್ವರೂಪಗಳ ಅರಿವು ಇಲ್ಲದಿರುವುದು.
- ಪತ್ರದ ವಿಷಯ ಪ್ರಸ್ತಾಪನೆಯ ಭಾಗದಲ್ಲಿ ಪ್ರಧಾನ ಆಶಯದ ಅಭಿವ್ಯಕ್ತಿ ಕಂಡುಬರುವುದಿಲ್ಲ.
- ನಿರ್ದಿಷ್ಟ ಪ್ರಶ್ನೆಗಳಿಗೆ ಹೆಚ್ಚಿನ ವಿದ್ಯಾರ್ಥಿಗಳು ಉತ್ತರಿಸದೇ ಇರುವುದು.
- ಕರಪತ್ರದಂತಹ ವ್ಯವಹಾರ ರೂಪದಲ್ಲಿ ಸ್ವರೂಪ, ಕೊಟ್ಟಿರುವ ವಿಷಯದ ಆಶಯವನ್ನು ಉಲ್ಲೇಖಿಸದಿರುವುದು.
- ಪ್ರಬಂಧದ ಸ್ವರೂಪ ತಿಳಿಯದಿರುವುದು, ಪ್ರಧಾನ ಆಶಯ, ಸ್ವ-ಚಿಂತನೆ, ನಿಗಮನ ಕಂಡುಬರುವುದಿಲ್ಲ.
- ಅಕ್ಷರ ತಪ್ಪುಗಳು, ಅಲ್ಪಪ್ರಾಣ-ಮಹಾ ಪ್ರಾಣ ಅಕ್ಷರಗಳಲ್ಲಿನ ಗೊಂದಲ.
- ವಾಕ್ಯ ರಚನೆಯಲ್ಲಿ ದೋಷಗಳು, ವಿಭಕ್ತಿ ಪ್ರತ್ಯಯಗಳ ತಿಳುವಳಿಕೆ ಇಲ್ಲದಿರುವುದು.
- ಆಸ್ವಾದನಾ ಟಿಪ್ಪಣಿಯ ಸ್ವರೂಪ ತಿಳಿಯದಿರುವುದು, ಪ್ರಧಾನ ಆಶಯದ ಪ್ರಕಟಣೆ, ವಿಶೇಷ ಪದ ಸಾಲುಗಳ ಗುರುತಿಸುವಿಕೆ, ವರ್ಣಿತ ವಿಚಾರಗಳು ಮುಂತಾದವುಗಳನ್ನು ಗುರುತಿಸುವಲ್ಲಿ ವಿದ್ಯಾರ್ಥಿಗಳು ವಿಫಲವಾಗಿರುವುದು.

ಭಾಷಾ ಪ್ರಯೋಗದಲ್ಲಿನ ದೋಷಗಳು, ವ್ಯಾಕರಣ ದೋಷಗಳು, ಬರವಣಿಗೆ, ಓದುವ ದೋಷಗಳನ್ನು ಪರಿಹರಿಸಲು ತರಗತಿಗಳಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಪಠ್ಯಕ್ಕೆ ಪೂರಕವಾಗಿ ಮತ್ತು ಮುಂದುವರಿದ ಚಟುವಟಿಕೆಗಳಾಗಿ ನಡೆಸುವುದು ಸೂಕ್ತ.

ಚಟುವಟಿಕೆಗಳು ಹೀಗೂ ಮಾಡಬಹುದು.

| ಉದ್ದೇಶಗಳು | ಚಟುವಟಿಕೆಗಳು | ಸಮಯ | ಜವಾಬ್ದಾರಿ |
|---|---|---|---|
| 1.ಎಲ್ಲಾ ಮಕ್ಕಳಿಗೂ ಸರಳ ವಾಕ್ಯಗಳನ್ನು ಓದಲು ಸಾಧ್ಯವಾಗಬೇಕು.<br>2.ಕನ್ನಡ ಭಾಷೆಯಲ್ಲಿ ಓದಲು ಬರೆಯಲು ವ್ಯವಹರಿಸಲು ಸಾಧ್ಯವಾಗಬೇಕು. | • ಪುಸ್ತಕಗಳನ್ನು ಸಂಗ್ರಹಿಸುವುದು<br>• ಆಸ್ವಾದನೆ<br>• ಓದುವಿಕೆ<br>• ಬರವಣಿಗೆ<br>• ಸ್ಪರ್ಧೆಗಳು | ಜುಲೈ<br>ಆಗಸ್ಟ್<br>ಸೆಪ್ಟಂಬರ್&<br>ಒಕ್ಟೋಬರ್<br>ನವಂಬರ್<br>ಜನವರಿ & ಫೆಬ್ರವರಿ | ಕನ್ನಡ ಭಾಷಾ ಅಧ್ಯಾಪಕರು/<br>ತರಗತಿಯಲ್ಲಿರುವ ವಿದ್ಯಾರ್ಥಿಗಳ ಹೆತ್ತವರು |

ಉತ್ತಮ ಓದು

ಉದ್ದೇಶ :- ಎಲ್ಲಾ ಮಕ್ಕಳಿಗೂ ಸರಳ ವಾಕ್ಯಗಳನ್ನು ಓದಲು ಸಾಧ್ಯವಾಗಬೇಕು.

ಚಟುವಟಿಕೆಗಳು:-

ಆಯ್ಕೆ ಮಾಡಿದ ಸರಳವಾದ

105 ಪುಸ್ತಕಗಳು

30 ಕನ್ನಡ ಕಥೆ ಪುಸ್ತಕ

20 ಕನ್ನಡ ಚಿತ್ರಕಥೆ ಪುಸ್ತಕ

15 ಕನ್ನಡ ಪದ್ಯ ಚುಟುಕು ಪುಸ್ತಕ

30 ಆತ್ಮಕಥೆ, ಜೀವನ ಚರಿತ್ರೆ, ಪ್ರವಾಸ ಕಥನ, ಕಥನ ಕವನ, ದಿನಚರಿ, ಪತ್ರ, ಪ್ರಬಂಧ, ನಾಟಕ ಇತ್ಯಾದಿ

5 ರಸಪ್ರಶ್ನೆ ಪುಸ್ತಕ

ಸಂಗ್ರಹಿಸುವುದು ಹೇಗೆ?

- ಒಂದೊಂದು ಪುಸ್ತಕ ಪ್ರತಿ ಮಗುವಿನಿಂದ, ಅಧ್ಯಾಪಕರಿಂದ ಹೆತ್ತವರಿಂದ, ಹಳೆ ವಿದ್ಯಾರ್ಥಿಗಳಿಂದ, ಹಿತೈಷಿಗಳಿಂದ, ಮನೆ ಸಂದರ್ಶನ ಮೂಲಕ.
- ಬೇರೆ ಯಾವುದಾದರೂ ಪ್ರಾಯೋಜಕತ್ವದಲ್ಲಿ ಪುಸ್ತಕ ಖರೀದಿಸುವುದು.

ಚಟುವಟಿಕೆ :- (ಆಲಿಸುವಿಕೆ ,ಮಾತನಾಡುವಿಕೆ, ಓದುವಿಕೆ L, S & R)

ಕನ್ನಡ ಪಿರೇಡ್ ಗಳಲ್ಲಿ ಮೊದಲ ಐದು ನಿಮಿಷ ಒಂದು ಮಗುವಿನಿಂದ ಗಟ್ಟಿಯಾಗಿ ಒಂದು ಪುಟ ಓದಿಸುವುದು. ಓದಿದ ಪುಸ್ತಕಗಳ ಹೆಸರು ಬರೆದಿಡಲು ಒಂದು ಪುಸ್ತಕ ಬೇಕು. ತರಗತಿಯ ಓದುವ

ಮೂಲೆಯಲ್ಲಿ ಸಾಕಷ್ಟು ಪುಸ್ತಕಗಳನ್ನು ಒದಗಿಸುವುದು. ಹೆಚ್ಚು ಪುಸ್ತಕಗಳನ್ನು ಓದಿದ ವಿದ್ಯಾರ್ಥಿ/ ವಿದ್ಯಾರ್ಥಿನಿಗೆ ಬಹುಮಾನ ನೀಡುವುದು.

ಉತ್ತಮ ಬರವಣಿಗೆ

ಉದ್ದೇಶ: ಎಲ್ಲ ಮಕ್ಕಳು ಪದ ವಾಕ್ಯಗಳನ್ನು ಬರೆಯಲು ಸಾಧ್ಯವಾಗಬೇಕು.

ವೈವಿಧ್ಯಪೂರ್ಣವಾದ ಬರವಣಿಗೆ ಚಟುವಟಿಕೆಗಳು.

ಉದಾ:

- ಕಥೆ, ಕವನ, ಪ್ರಬಂಧ, ದಿನಚರಿ, ಲೇಖನ ಇತ್ಯಾದಿ
- ತರಗತಿ ಸಂಚಿಕೆ ತಯಾರಿ
- ಭಿತ್ತಿಪತ್ರಿಕೆ ತಯಾರಿ
- ಓದುವ ಕಾರ್ಡ್ ತಯಾರಿ
- ಮಾದರಿಕೊಟ್ಟು ಸ್ಪರ್ಧೆ ನಡೆಸಿ ಉತ್ತಮವಾದುದನ್ನು ಕಂಡುಹಿಡಿದು ಸರಿಪಡಿಸಿ ಎ4 ಶೀಟ್ ಕೊಟ್ಟು ಚಂದವಾಗಿ ಬರೆದು ಚಿತ್ರ ಬಿಡಿಸಿ, ಬಣ್ಣ ಹಚ್ಚಿ ಲ್ಯಾಮಿನೇಷನ್ ಮಾಡಿ ಓದುವ ಕಾರ್ಡ್ ತಯಾರಿಸುವುದು.
- ವೈಯಕ್ತಿಕವಾಗಿ 'ನನ್ನ ಪುಸ್ತಕ' ತಯಾರಿ. (ಕಥೆ, ಕವನ, ಚುಟುಕು, ಪ್ರಬಂಧ ಇತ್ಯಾದಿಗಳ ಸಂಗ್ರಹ)

ಪ್ರತಿಭಾವಂತರಿಗೆ

- ಹಾಡನ್ನು ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ಆಯ್ಕೆ ಮಾಡಿ ಇತರ ಮಕ್ಕಳ ಮುಂದೆ ಅವರ ಪ್ರತಿಭೆಯನ್ನು ಪ್ರಕಟಪಡಿಸಿ ಅವರಿಗೆ ಕೇಳಲೂ, ಆಸ್ವಾದಿಸಲೂ ಅವಕಾಶ ಲಭಿಸುವಂತೆ ಎರಡು ವಾರಕ್ಕೊಮ್ಮೆ ಸಾಹಿತ್ಯ/ ಬಾಲಸಭೆ ಸೇರುವುದು.
- ಮೊದಲೇ ಯೋಜನೆ ಮಾಡಬೇಕು.
- ಒಮ್ಮೆ ಹಾಡಿದ / ಹೇಳಿದ ಮಕ್ಕಳನ್ನು ಸಭೆಗೆ ಕೇಳುಗರಾಗಿಸಬೇಕು. ಮೊದಲ ಸಭೆಯಲ್ಲಿ ಕೇಳುಗರಾದವರು ನಂತರದ ಸಭೆಗೆ ಹಾಡುವವರಾಗಬೇಕು.
- ಇದೇ ರೀತಿ ಸೃಜನಶೀಲ ಹವ್ಯಾಸಗಳನ್ನು ಪ್ರೋತ್ಸಾಹಿಸುವುದು.
- ಪ್ರೊಜೆಕ್ಟರ್ ಉಪಯೋಗಿಸಿ 10 ಕಥೆಗಳು/ ಪದ್ಯ/ ತಮಾಷೆ ಚಿತ್ರಗಳ ವಿಡಿಯೋ ತೋರಿಸಬೇಕು. ಉದಾ:- ತೆನಾಲಿ ರಾಮನ ಕಥೆಗಳು, ಪಂಚತಂತ್ರ ಕಥೆಗಳು.
- ಅವುಗಳನ್ನು ಸ್ವತಂತ್ರವಾಗಿ ಅಭಿನಯಿಸಲು ಪ್ರೋತ್ಸಾಹಿಸುವುದು.

ಉತ್ತಮ ಕಲಿಕೆಗೆ ಏನೇನು?

- ರಸಪ್ರಶ್ನೆ
- ಪದ ತಯಾರಿ
- ಪಾತ್ರಾಭಿನಯ
- ಕಥೆ ಪೂರ್ತಿಗೊಳಿಸುವುದು / ಕಥಾ ರಚನೆ
- ಪದ್ಯ ಪೂರ್ತಿಗೊಳಿಸುವುದು / ಪದ್ಯ ರಚನೆ
- ಪದಬಂಧ
- ನೆನಪು ಶಕ್ತಿ ಪರೀಕ್ಷೆ
- ಬಣ್ಣ ಹಚ್ಚುವುದು
- ಪದ್ಯ ಹಾಡುವುದು / ಕಂಠಪಾಠ
- ಅಭಿನಯ ಗೀತೆ
- ಕಥೆ ಹೇಳುವುದು / ಕಥೆ ಓದಿ ಚಿತ್ರರಚನೆ
- ಕಾವ್ಯ ಪಾರಾಯಣ
- ಪದಬಂಡಿ / ಪದ್ಯಬಂಡಿ / ವಾಕ್ಯ ಬಂಡಿ
- ಒಗಟುಗಳು / ಒಗಟು ರಚನೆ
- ಸಂಭಾಷಣೆ / ಸಂಭಾಷಣೆ ರಚನೆ
- ನೃತ್ಯ
- ಪ್ರೊಜೆಕ್ಟರ್ ಮೂಲಕ ತೆನಾಲಿ ರಾಮನ ಕಥೆಗಳನ್ನು ತೋರಿಸುವುದು
- ಬೀರಬಲ್ ಕಥೆಗಳು ಮತ್ತು ಇತರ ಕಥೆಗಳು
- ಉತ್ತಮವಾದ ಪದ್ಯಗಳನ್ನು ಕೇಳಿಸುವುದು.

- 1. ಆಲಿಸುವಿಕೆ ಸ್ಪರ್ಧೆ:-
- ಪ್ರೊಜೆಕ್ಟರ್ ನಲ್ಲಿ ಒಂದು ಕಥೆ ತೋರಿಸುವುದು / ಕಥೆ ಹೇಳುವುದು.
- ಬಳಿಕ ಆ ಕಥೆಗೆ ಸಂಬಂಧಿಸಿದ ಹತ್ತು ಪ್ರಶ್ನೆಗಳನ್ನು ಕೇಳುವುದು.
- ಮಕ್ಕಳಿಗೆ ಪೇಪರ್ ಕೊಟ್ಟು ಅದರಲ್ಲಿ ಉತ್ತರಿಸಲು ಹೇಳುವುದು.
- ಕನ್ನಡ ಅಧ್ಯಾಪಕರು ಸ್ಪರ್ಧೆ ನಡೆಸುವುದು.
- ಯಾರು ಹೆಚ್ಚು ಉತ್ತರಿಸುತ್ತಾರೋ ಅವರು ಜಯಶಾಲಿಗಳಾಗುತ್ತಾರೆ.

2. ಮಾತನಾಡುವಿಕೆ:-

- ಒಂದು ವಿಷಯ ಕೊಟ್ಟು ಆ ವಿಷಯಕ್ಕೆ ಸಂಬಂಧಿಸಿ ಐದು ನಿಮಿಷ ಮಾತನಾಡಲು ಹೇಳುವುದು.
- ಕಥೆ ಹೇಳಲು ಹೇಳುವುದು.
- ಪದ್ಯ ಹಾಡಿಸುವುದು.

3. ಓದುವಿಕೆ:-

- ಅಧ್ಯಾಪಕರು ಓದುವ ಕಾರ್ಡ್ ಕೊಡುವುದು.
- ಪ್ರೊಜೆಕ್ಟರ್ ನಲ್ಲಿ ಒಂದು ವಿವರಣೆ ತೋರಿಸುವುದು.
- ಅದನ್ನು ತಪ್ಪಿಲ್ಲದೆ ಗಟ್ಟಿಯಾಗಿ ಸ್ವರ ಏರಿಳಿತಗಳೊಂದಿಗೆ ಓದಲು ಹೇಳುವುದು.
- ಚೆನ್ನಾಗಿ ತಪ್ಪಿಲ್ಲದೆ ಓದಿದ ಮಗುವಿಗೆ ಬಹುಮಾನ ನೀಡುವುದು.

4. ಬರವಣಿಗೆ:-

- ಪ್ರೊಜೆಕ್ಟರ್ ನಲ್ಲಿ ಕೆಲವು ಚಿತ್ರಗಳನ್ನು ತೋರಿಸುವುದು.
- ಅದನ್ನು ನಿರೀಕ್ಷಿಸಿ ಅವುಗಳ ವಿವರಣೆ ಬರೆಯಲು ಹೇಳುವುದು.
- ಪದ್ಯಕ್ಕೆ ಸಾಲು ಸೇರಿಸಲು ಹೇಳುವುದು. ಇತರ ವ್ಯವಹಾರ ರೂಪಗಳನ್ನು ರಚಿಸಲು ಹೇಳುವುದು.

5. ಸ್ಪರ್ಧೆಗಳು:-

- ಆಲಿಸುವಿಕೆ, ಓದುವಿಕೆ, ಬರೆಯುವಿಕೆ ಕಳೆದ ನಂತರ ಸ್ಪರ್ಧೆಗಳನ್ನು ನಡೆಸುವುದು.
- ಕನ್ನಡ ಭಾಷಾ ಅಧ್ಯಾಪಕರು ಇದರ ಜವಾಬ್ದಾರಿಯನ್ನು ವಹಿಸುವುದು.

6. ಸಾಹಿತ್ಯ ಶಿಬಿರಗಳು:-

- ಕಥೆ, ಕವನ, ಲೇಖನ, ಹಾಡುವಿಕೆ, ಅಭಿನಯಕ್ಕಾಗಿ ವಿಶೇಷ ಶಿಬಿರಗಳನ್ನು ನಡೆಸುವುದು.

7. ಪುಸ್ತಕಗಳನ್ನು ಸಂಗ್ರಹಿಸುವುದು:-

- ಕನ್ನಡ ಭಾಷಾ ಅಧ್ಯಾಪಕರ ನೇತೃತ್ವದಲ್ಲಿ ನಡೆಸುವ ಚಟುವಟಿಕೆ ಇದಾಗಿದೆ.
- ಪ್ರತಿಯೊಂದು ಮಗುವಿನಲ್ಲಿಯೂ ಕಡಿಮೆ ಎಂದರೆ ಒಂದು ಪುಸ್ತಕವನ್ನು ಶಾಲೆಗೆ ಕೊಡಲು ಹೇಳುವುದು.
- ಅದೇ ರೀತಿಯಲ್ಲಿ ಶಾಲಾ ಸಿಬ್ಬಂದಿ ವರ್ಗದವರಲ್ಲಿಯೂ ಒಂದೊಂದು ಪುಸ್ತಕ ಕೊಡಲು ಹೇಳುವುದು.
- ಬಳಿಕ ಶಾಲೆಯಿಂದ ನಿವೃತ್ತಿ ಹೊಂದಿದ ಕನ್ನಡ ಅಧ್ಯಾಪಕರಲ್ಲಿ ಅವರ ಮನೆಗೆ ಭೇಟಿ ನೀಡಿ ಪುಸ್ತಕ ತೆಗೆಯಲು, ಸಂಗ್ರಹಿಸಲು ಬೇಕಾದ ಸಹಾಯವನ್ನು ಕೇಳುವುದು.
- ಧನ ಸಹಾಯವಾದರೆ ಹಣ ಸಂಗ್ರಹಿಸಿ ಕನ್ನಡ ಅಧ್ಯಾಪಕರು /ಮುಖ್ಯೋಪಾಧ್ಯಾಯರು ಶಾಲೆಗೆ ಬೇಕಾದ ಪುಸ್ತಕಗಳನ್ನು ಆಯ್ಕೆ ಮಾಡಿ ತರುವುದು.
- ಅಗತ್ಯಬಿದ್ದಲ್ಲಿ ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷರನ್ನು ಸೇರಿಸಿಕೊಳ್ಳುವುದು.

- ರಕ್ಷಕ-ಶಿಕ್ಷಕ ಸಂಘದ ಅಧ್ಯಕ್ಷರಲ್ಲಿ ಒಂದೊಂದು ಪುಸ್ತಕಗಳನ್ನು ಶಾಲೆಗೆ ಕೊಡುಗೆಯಾಗಿ ನೀಡಲು ಹೇಳುವುದು.

8.ಆಸ್ವಾದನೆ:-

ಹಾಡು ಹಾಡಲು ಸಾಮರ್ಥ್ಯವಿರುವ ಮಕ್ಕಳನ್ನು ಆಯ್ಕೆ ಮಾಡಿ ಇತರ ಮಕ್ಕಳ ಮುಂದೆ ಅವರ ಪ್ರತಿಭೆಯನ್ನು ಪ್ರಕಟಪಡಿಸಿ ಅವರಿಗೆ ಕೇಳಲೂ / ಹೇಳಲೂ ಅವಕಾಶ ಲಭಿಸುವಂತೆ ಎರಡು ವಾರಕ್ಕೊಮ್ಮೆ ಸಾಹಿತ್ಯ ಸಭೆ ನಡೆಸುವುದು.

**ಚಟುವಟಿಕೆ-1**

## ಆಸ್ವಾದನ ಟಿಪ್ಪಣಿ

ಕೆಳಗಿನ ಸಾಲುಗಳ ಆಸ್ವಾದನ ಟಿಪ್ಪಣಿ ಬರೆಯುವ ಚಟುವಟಿಕೆ ಹೀಗೂ ಮಾಡಬಹುದು.

ಉದಾ:- 'ತೌಳವ ಮಾತೆ' ಕವನದ ಈ ಕೆಳಗಿನ ಸಾಲುಗಳ ಆಸ್ವಾದನ ಟಿಪ್ಪಣಿಯನ್ನು ಬರೆಯುವ ಚಟುವಟಿಕೆಯನ್ನು ಹೇಗೆ ಮಾಡಬಹುದು?

ಹಿಂದು ಜೈನ ಮುಸ್ಲೀಮ ಕ್ರೈಸ್ತರಾವೊಂದೇ ಬಾಂಧವರೆಮ್ಮಾ
ತಂದೆ ದೇವರೊಬ್ಬನೇ ,ನೀನೊಬ್ಬಳೇ ನಮ್ಮೆಲ್ಲರ ತಾಯಮ್ಮ!
ಎಂದಿನವಳೊ ನೀನಿಂದಿನವರೆ ನಾವಾದೊಡೆಮ್ಮನಕ್ಕರೆಯಿಂ
ನಿನ್ನೆದೆ ತೊಟ್ಟಿಲೊಳಿಟ್ಟು ಸಾಕುತಿಹೆ ಸರಸಿಯಂತೆ ತಾವರೆಯಂ||

ಕವನದಲ್ಲಿರುವ ಎಲ್ಲ ಉತ್ತಮ ಅಂಶಗಳನ್ನು ತಿಳಿದುಕೊಂಡು ಅದರ ಸೊಗಸನ್ನು ಆಸ್ವಾದಿಸಬೇಕು. ಕವನದ ಆಸ್ವಾದನೆಯಲ್ಲಿ ವಿದ್ಯಾರ್ಥಿಯ ಚಿಂತನೆ, ಸೃಜನಶೀಲತೆ, ಭಾವನೆಗಳು ಮೇಳೈಸುವುದನ್ನು ಗಮನಿಸಬಹುದು. ತರಗತಿಯ ಎಲ್ಲಾ ಸ್ಥರದ ವಿದ್ಯಾರ್ಥಿಗಳನ್ನು ಕೂಡ ವಿವಿಧ ಪ್ರಕ್ರಿಯೆಗಳ ಮೂಲಕ ಕವನದ ಆಸ್ವಾದನಾ ಹಂತಕ್ಕೆ ತಲುಪಿಸಬೇಕು.

ಆಸ್ವಾದನ ಹಂತಕ್ಕೆ ತಲುಪಲಿರುವ ವಿವಿಧ ಹಂತಗಳು

- ಓದುವಿಕೆ /ಹಾಡುವಿಕೆ
- ಕೇಂದ್ರಾಶಯವನ್ನು ತಿಳಿದುಕೊಳ್ಳುವುದು.
- ಪದ ಪ್ರಯೋಗ ವಾಕ್ಯ ವಿಶೇಷತೆಗಳನ್ನು ತಿಳಿದುಕೊಳ್ಳುವುದು.
- ವರ್ಣನೆ, ಅಲಂಕಾರ, ಪ್ರತಿಮೆ ಪ್ರತೀಕಗಳನ್ನು ಗುರುತಿಸುವುದು.
- ಸ್ವಾರಸ್ಯವಿರುವ ಸಾಲುಗಳನ್ನು ಗುರುತಿಸುವುದು.
- ತಾಳ/ಲಯ/ಗೇಯತೆ
- ನಿಗಮನ

  ಕವನದ ಓದು ಆಸ್ವಾದನೆಯ ಮೊದಲ ಹಂತವಾಗಿದೆ. ವಿದ್ಯಾರ್ಥಿಗಳೇ ರಾಗ ಸಂಯೋಜಿಸಿ ಹಾಡಲು ಪ್ರೇರೇಪಿಸುವುದು. ಅನಂತರ ವಿದ್ಯಾರ್ಥಿಗಳು ನವೀನ ಪದಗಳ ಅರ್ಥ, ಪದ ವಿಂಗಡಣೆ ಚಟುವಟಿಕೆಗಳನ್ನು ನಡೆಸಲಿ. ಈ ಸಂದರ್ಭಗಳಲ್ಲಿ ಅಧ್ಯಾಪಕರು ಸೂಕ್ತ ಮಾರ್ಗದರ್ಶನವನ್ನು ನೀಡಬೇಕು. ಕವನದ ಮೊದಲ ಓದಿನಲ್ಲಿ ವಿದ್ಯಾರ್ಥಿಗೆ ಬೇಕಾದಷ್ಟು

ಆಸ್ವಾದನಾ ಅಂಶಗಳು ಮನವರಿಕೆಯಾಗಬೇಕೆಂದಿಲ್ಲ. ರಸಾಸ್ವಾದನೆಯ ಅಂಶಗಳು ಒಬ್ಬರಿಂದ ಇನ್ನೊಬ್ಬರಿಗೆ ಬೇರೆ ಬೇರೆಯಾಗಿರಬಹುದು.

ಕೆಲವು ಪ್ರಶ್ನೆಗಳ ಮೂಲಕ ವಿದ್ಯಾರ್ಥಿಗಳನ್ನು ಮುಂದಿನ ಹಂತಕ್ಕೆ ತಲುಪಿಸಬಹುದು.

- ✔ ಈ ಕವನದಲ್ಲಿರುವ ಉತ್ತಮ ಅಂಶಗಳು ಯಾವುವು?
- ✔ 'ನಿನ್ನೆದೆ ತೊಟ್ಟಿಲಲಿಟ್ಟು ಸಾಕುತಿಹೆ, ಸರಸಿಯಂತೆ ತಾವರೆಯಂ' ಈ ಸಾಲುಗಳನ್ನು ಓದಿದಾಗ ನಿಮ್ಮ ಮನಸ್ಸಿನಲ್ಲಿ ಮೂಡಿ ಬಂದ ವಿಚಾರಗಳೇನು?
- ✔ 'ತಂದೆ ದೇವರೊಬ್ಬನೆ, ನೀನೊಬ್ಬಳೆ ನಮ್ಮೆಲ್ಲರ ತಾಯಮ್ಮ' ಈ ಸಾಲುಗಳನ್ನು ಓದಿದಾಗ ನಿಮ್ಮ ಮನಸ್ಸಿನಲ್ಲಿ ಮೂಡಿಬಂದ ವಿಚಾರಗಳೇನು?
- ✔ ಕವನದ ಶೋಭೆಯನ್ನು ಹೆಚ್ಚಿಸುವುದಕ್ಕೆ ಸಹಕಾರಿಯಾದ ಅಲಂಕಾರದಿಂದ ಕೂಡಿದ ಸಾಲುಗಳಿವೆಯೇ?

ಉದಾ : ನಿನ್ನದೆ ತೊಟ್ಟಿಲಲಿಟ್ಟು ಸಾಕುತಿಹೆ ಸರಸಿಯಂತೆ ತಾವರೆಯಂ

ಮೊದಲಾದ ಪ್ರಶ್ನೆಗಳನ್ನು ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಕೇಳಿ ತರಗತಿಯನ್ನು ಮುಂದುವರಿಸುವುದು.

- ಕವಿತೆಯ ಕುರಿತಾದ ಮೇಲಿನ ಸೂಚಕಗಳ ಆಧಾರದಲ್ಲಿ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಮೌಖಿಕವಾಗಿ ಅಭಿವ್ಯಕ್ತಪಡಿಸುವುದು.
- ಪ್ರಧಾನ ವಿಚಾರಗಳನ್ನು ಅಧ್ಯಾಪಕರು ಕರಿಹಲಗೆಯಲ್ಲಿ ಬರೆಯುವುದು. ಬಿಟ್ಟು ಹೋದ ಅಂಶಗಳನ್ನು ಅಧ್ಯಾಪಕರು ಸೇರಿಸುವುದು.
- ಅನಂತರ ಇವೆಲ್ಲವನ್ನು ಕ್ರೋಡೀಕರಿಸಿ ಆಸ್ವಾದನಾ ಟಿಪ್ಪಣಿಯನ್ನು ಗುಂಪಿನಲ್ಲಿ ಬರೆಯಲು ಸೂಚಿಸುವುದು.
- ಇಲ್ಲಿಯೂ ಬಿಟ್ಟು ಹೋದ ಅಂಶಗಳನ್ನು ಅಧ್ಯಾಪಕರ ಸೂಚನೆಯಂತೆ ಸೇರಿಸಿ ಪರಿಷ್ಕರಿಸುವುದು.
- ಅನಂತರ ವೈಯಕ್ತಿಕವಾಗಿ ವಿದ್ಯಾರ್ಥಿಗಳಲ್ಲಿ ಬರೆಯಲು ಸೂಚಿಸುವುದು. ವಿದ್ಯಾರ್ಥಿಗಳು ಬರೆದ ಆಸ್ವಾದನಾ ಟಿಪ್ಪಣಿಯನ್ನು ಅಧ್ಯಾಪಕರು ಕೂಲಂಕುಷವಾಗಿ ನೋಡುವುದು.
- ಇಲ್ಲಿ ಭಾಷಾ ದೋಷಗಳ ಮತ್ತು ಇತರ ಅಂಶಗಳ ತಿದ್ದುಪಡಿ ನಡೆಯಬೇಕು.
  ಉದಾ: ಭಾಷಾ ದೋಷಗಳಾದ ಹ್ರಸ್ವ, ದೀರ್ಘ, ಅಲ್ಪಪ್ರಾಣ, ಮಹಾಪ್ರಾಣ, ಲಿಂಗ, ವಿಭಕ್ತಿ, ಒತ್ತಕ್ಷರ ಇತ್ಯಾದಿ.
- ಬರೆದ ಬರಹಗಳಿಗೆ ಗ್ರೇಡ್ ನೀಡುವುದು.

**ಚಟುವಟಿಕೆ-2**

## ಪ್ರಬಂಧ ರಚನೆ

ಕಾಲುವಾರ್ಷಿಕ ಮೌಲ್ಯಮಾಪನ ಪರೀಕ್ಷೆಯ ಉತ್ತರ ಪತ್ರಿಕೆಗಳ ವಿಶ್ಲೇಷಣೆಯನ್ನು ಮಾಡಿದಾಗ 50 ಶೇಕಡ ವಿದ್ಯಾರ್ಥಿಗಳ ಪ್ರಬಂಧದ ಸ್ವರೂಪ, ಭಾಷಾ ಅಂಶಗಳು (ಅಕ್ಷರ ತಪ್ಪು, ಹ್ರಸ್ವ-ದೀರ್ಘ, ಅಲ್ಪಪ್ರಾಣ-ಮಹಾಪ್ರಾಣ) ಮೊದಲಾದ ತಿಳುವಳಿಕೆಗಳು ಕಡಿಮೆ ಇರುವುದು ಕಂಡುಬಂದಿದೆ. ಇವುಗಳನ್ನು ಪರಿಹರಿಸಲು ದೈನಂದಿನ ತರಗತಿ ಅಥವಾ ವಿಶೇಷ ತರಗತಿಗಳನ್ನು ಆಯೋಜಿಸುವುದು ಒಳಿತು.

ಉದಾಹರಣೆಗೆ:- 'ತೌಳವ ಮಾತೆ' ಕವನದ ಆಧಾರದಲ್ಲಿ *ತುಳುನಾಡಿನ ಸಾಂಸ್ಕೃತಿಕ ವಿಶೇಷಗಳ* ಕುರಿತು ಒಂದು ಪ್ರಬಂಧ ಬರೆಯಿಸುವುದು.

ಅಧ್ಯಾಪಕರು ಮೇಲಿನ ಭಾಷಾ ವ್ಯವಹಾರ ರೂಪದ ಪ್ರಕ್ರಿಯಾಧಾರಿತ ಚಟುವಟಿಕೆಯನ್ನು ನಡೆಸಲು ಪಾಠ ಯೋಜನೆಯನ್ನು ಮಾಡುವುದು ಉತ್ತಮ.

ವಿದ್ಯಾರ್ಥಿಗಳಲ್ಲಿ ತುಳುನಾಡಿನ ಸಾಂಸ್ಕೃತಿಕ ವೈಶಿಷ್ಟ್ಯಗಳ ಕುರಿತು ಪ್ರಬಂಧ ಬರೆಸುವ ಮೊದಲು ಪಾಠದ ಆಧಾರದಲ್ಲಿ ಮತ್ತು ವಿದ್ಯಾರ್ಥಿಗಳ ಅನುಭವದ ಆಧಾರದಲ್ಲಿ ಕಂಡುಕೊಂಡ ವಿಶೇಷತೆಗಳ ಕುರಿತಾದ ವಿಚಾರಗಳನ್ನು ಲಘು ಚರ್ಚೆಗೆ ಒಳಪಡಿಸಿ ಕೆಲವು ಪ್ರಧಾನ ಅಂಶಗಳನ್ನು ಪಟ್ಟಿ ಮಾಡುವುದು.

ಉದಾ:-

- ಹಿಂದು, ಮುಸಲ್ಮಾನ, ಜೈನರ ಆರಾಧನಾಲಯಗಳು ಇಲ್ಲಿವೆ.
- ಎಲ್ಲರೂ ಸಹಬಾಳ್ವೆ ನಡೆಸುತ್ತಾರೆ.
- ಪರಶುರಾಮನ ಸೃಷ್ಟಿ, ಪೂರ್ವದಲ್ಲಿ ಸಹ್ಯಾದ್ರಿ, ಪಶ್ಚಿಮದಲ್ಲಿ ವಿಶಾಲ ಸಾಗರ ಉತ್ತರದಲ್ಲಿ ಕಲ್ಯಾಣಪುರ ಹೊಳೆ ದಕ್ಷಿಣದಲ್ಲಿ ಚಂದ್ರಗಿರಿ.
- ಕಲೆ, ಕ್ರೀಡೆ, ಕಸುಬು, ಆಚರಣೆ, ಆಹಾರ, ಕುಣಿತ, ಜಾನಪದ ಸಾಹಿತ್ಯ ಇತ್ಯಾದಿಗಳ ವಿವರಗಳು, ತುಳುನಾಡಿನ ನಂಬಿಕೆಗಳು,
- ತುಳುನಾಡಿನ ಆರಾಧನಾ ಕ್ರಮಗಳು- ನಾಗರ ಪಂಚಮಿ, ನಾಗತಂಬಿಲ, ಆಶ್ಲೇಷ ಬಲಿ, ಭೂತಾರಾಧನೆ, ಹಬ್ಬಗಳು.

ಅನಂತರ ಹೆಚ್ಚಿನ ಮಾಹಿತಿಗಾಗಿ ತುಳನಾಡಿನ ಸಾಂಸ್ಕೃತಿಕ ವಿಶೇಷತೆಗಳು ಎನ್ನುವ ಲೇಖನವನ್ನು ಪ್ರೊಜೆಕ್ಟರ್ ಮೂಲಕ ತೋರಿಸುವುದು. ಅದೇ ರೀತಿ ಏರ್ಯ ಲಕ್ಷ್ಮೀನಾರಾಯಣ ಆಳ್ವರ 'ತುಳುನಾಡಿನ ಸಂಸ್ಕೃತಿ' ಪ್ರಬಂಧವನ್ನು ಕೊಡುವುದು.

ಇವುಗಳ ಮಾಹಿತಿಗಳ ಆಧಾರದಲ್ಲಿ ಪ್ರಬಂಧ ಬರೆಯಲು ಸೂಚಿಸುವುದು.

- ಪ್ರಬಂಧ ಬರೆಯುವಾಗ ಪ್ರಧಾನ ಅಂಶಗಳ ಕಡೆಗೆ ವಿಶೇಷ ಗಮನವನ್ನು ಕೊಡುವುದು.
- ವಿಷಯ / ಆಶಯಕ್ಕೆ ಸಂಬಂಧಿಸಿದ ಪರಮಾವಧಿ ವಿಚಾರಗಳು ಒಳಗೊಂಡಿವೆ.
- ಆಶಯಗಳು ಮತ್ತು ನಿಗಮನಗಳನ್ನು ಓದುಗರಿಗೆ ತಲುಪಿಸಲು ಸಮರ್ಥವಾದ ಭಾಷೆ (ವಾಕ್ಯರಚನೆ, ವಿಶೇಷ ಪ್ರಯೋಗಗಳು) ಯನ್ನು ಬಳಸಲಾಗಿದೆ.
- ಪ್ರಬಂಧದ ಸ್ವರೂಪವನ್ನು ಪಾಲಿಸುವುದು. (ಉತ್ತಮ ಆರಂಭ, ಪ್ರಧಾನ ಆಶಯಗಳು, ವಿವರಣೆಗಳು, ಉಪಸಂಹಾರ)
- ವಿಷಯಕ್ಕೆ ಸಂಬಂಧಿಸಿದ ತನ್ನ ಅಭಿಪ್ರಾಯ, ನಿಗಮನಗಳನ್ನು ಸೂಕ್ತವಾದ ಉದಾಹರಣೆಯೊಂದಿಗೆ ಸಮರ್ಥಿಸಲಾಗಿದೆ.

ಅಂತಿಮ ಉತ್ಪನ್ನವು ತಯಾರಾದ ಮೇಲೆ ಅಧ್ಯಾಪಕರು ಓದಿ ಸೂಕ್ತ ತಿದ್ದುಪಡಿಯೊಂದಿಗೆ ವಿದ್ಯಾರ್ಥಿಗಳಿಗೆ ಮರಳಿಸುವುದು.

ಮನೆಕೆಲಸವಾಗಿ ಸರಳವಾದ ವಿಷಯವನ್ನು ಕೊಟ್ಟು ಪ್ರಬಂಧ ಬರೆಯಲು ಸೂಚಿಸುವುದು.

**ಚಟುವಟಿಕೆ-3**

## ಕಥೆಯನ್ನು ಬರೆಯುವುದು.

**'ಮುಳ್ಳಿಡಿದ ಮರನೇರಿದಂತಾದುದು' ಕಾವ್ಯ ಭಾಗದಲ್ಲಿ ಬಂದಿರುವ ಕಥೆಯನ್ನು ಸಂಗ್ರಹಿಸಿ ನಿಮ್ಮ ಮಾತುಗಳಲ್ಲಿ ಬರೆಯಿರಿ. ಕಥೆಗೆ ಸೂಕ್ತವಾದ ಶೀರ್ಷಿಕೆಯನ್ನು ನೀಡಿರಿ.**

ಸಾಧಾರಣವಾಗಿ ಈ ಪ್ರಶ್ನೆಯನ್ನು ಅಥವಾ ಇದೇ ಆಶಯವು ಉತ್ತರವಾಗಿ ಬರುವಂತೆ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಪ್ರಶ್ನೆಗಳನ್ನು ಕೊಡುವುದನ್ನು ಕಾಣಬಹುದು. ಇದಕ್ಕೆ ಹೆಚ್ಚಿನ ವಿದ್ಯಾರ್ಥಿಗಳು ಉತ್ತರವನ್ನು ಬರೆಯುತ್ತಾರೆ. ಆದರೂ ಬರವಣಿಗೆಯಲ್ಲಿ ಭಾಷೆಯ ಶೈಲಿ, ಕಥಾ ಸ್ವರೂಪದಲ್ಲಿ ಕೊರತೆಗಳನ್ನು ಕಾಣುತ್ತೇವೆ. ಅಂತೆಯೇ ಭಾಷಾ ಪರವಾದ, ವ್ಯಾಕರಣ ಪರವಾದ, ಆಶಯ ಪರವಾದ ದೋಷಗಳನ್ನು ಕಾಣುತ್ತೇವೆ. ಹಾಗಾದರೆ ಉತ್ತಮವಾದ ಒಂದು ಉತ್ತರವನ್ನು ಹೇಗೆ ಪಡೆಯಬಹುದು ಎನ್ನುವುದನ್ನು ಯೋಚಿಸಬೇಕು.

ಉದಾಹರಣೆಗೆ ಹೀಗೆ ಮಾಡಬಹುದೇ?

ಈ ಚಟುವಟಿಕೆಯನ್ನು ಮಾಡುವಾಗ ತರಗತಿಯಲ್ಲಿ ಕಾವ್ಯ ಭಾಗದ ಪ್ರಕ್ರಿಯಾಧಾರಿತ ಬೋಧನೆ ಮತ್ತು ಕಲಿಕೆಯೂ ನಡೆದಿರುತ್ತದೆ. ಆದುದರಿಂದ ಚಟುವಟಿಕೆ ನಡೆಸುವಾಗ ತರಗತಿಯಲ್ಲಿ ಮೊದಲು ನಡೆಸಿದ ಪ್ರಕ್ರಿಯೆಗಳಲ್ಲಿ ವಿದ್ಯಾರ್ಥಿಗಳು ಕಂಡುಕೊಂಡ ವಿಚಾರಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳುವುದು ಒಳ್ಳೆಯದಲ್ಲವೇ?

ಉದಾ:-

ಕಥಾ ಸಂದರ್ಭ, ಪ್ರಧಾನ ಆಶಯಗಳು-

- ಉದ್ದಾಲಕನು ಚಂಡಿಯೆನ್ನುವವಳನ್ನು ವಿವಾಹವಾದನು.
- ತನ್ನ ಪೂಜೆ, ವ್ರತ, ಹೋಮಗಳಿಗೆ ಬೇಕಾದ ಅನುಕೂಲತೆಗಳನ್ನು ನಡೆಸುವುದರೊಂದಿಗೆ ಮನೆ ಕೆಲಸಗಳನ್ನು ಮಾಡುವುದು ಎನ್ನುವ ನಿರ್ದೇಶನವನ್ನು ಉದ್ದಾಲಕನು ಪತ್ನಿಯಾದ ಚಂಡಿಗೆ ನೀಡುವುದು.
- ಉದ್ದಾಲಕನು ಹೇಳಿದ ಯಾವ ಕೆಲಸಗಳನ್ನು ತಾನು ಮಾಡುವುದಿಲ್ಲ ಎನ್ನುವ ಚಂಡಿಯ ಹಠದ ಮಾತು.
- ಮಾಡಬೇಕಾದ ಕಾರ್ಯ / ಕೆಲಸಗಳ ವಿಪರೀತವನ್ನು ಹೇಳುವಂತೆ ಕೌಂಡಿನ್ಯರ ಉಪದೇಶ.
- ಉದ್ದಾಲಕನ ತಂದೆಯ ಶ್ರಾದ್ಧದ ದಿನವೂ ಸಮೀಪಿಸುವುದು.
- ಅದಕ್ಕೆ ಬೇಕಾದ ವಸ್ತುಗಳನ್ನು ಅಕ್ಕಿ ತರಕಾರಿಯನ್ನು ತರುವುದಿಲ್ಲ ಎಂದು ಉದ್ದಾಲಕ ಹೇಳುವುದು.
- ಬರುವ ವಿಪ್ರರನ್ನು ಆದರಿಸುವುದಿಲ್ಲ, ವಸ್ತ್ರ ತಾಂಬೂಲ ದಕ್ಷಿಣೆಗಳನ್ನು ಕೊಡುವುದಿಲ್ಲ, ಪಾಯಸ, ಬೆಲ್ಲ, ತುಪ್ಪ, ಜೇನು, ಭಕ್ಷ ಭೋಜ್ಯಗಳನ್ನು ನೀಡುವುದಿಲ್ಲ ಎನ್ನುವುದು.
- ಹೀಗೆ ಜಾಗರೂಕತೆಯಿಂದ ಬೇಕಾದ ವ್ಯವಸ್ಥೆಗಳ ವಿರುದ್ಧವಾದುದನ್ನು ಹೇಳಿ ಬೇಕಾದ ವ್ಯವಸ್ಥೆಯನ್ನು ಉದ್ದಾಲಕನು ಮಾಡುವುದು.
- ಶ್ರಾದ್ಧದ ಪಿಂಡವನ್ನು ಮಡುವಿಗೆ ಬಿಸಾಡುವಂತೆ ಅಚಾತುರ್ಯದಿಂದ ನೇರವಾಗಿ ಹೇಳುವುದು.
- ಇದರ ವಿಪರೀತವಾಗಿ ಚಂಡಿಯು ಪಿಂಡವನ್ನು ಬೀದಿಗೆ ಬಿಸಾಡುವುದು.
- ಸಿಟ್ಟಿಗೆದ್ದ ಉದ್ದಾಲಕನು ಚಂಡಿಗೆ ಕಲ್ಲಾಗುವಂತೆ ಶಾಪ ಕೊಡುವುದು.
- ಕೊನೆಗೆ ಅವಳಲ್ಲಿ ಕಾರುಣ್ಯವು ಹೊಂದಿ ಅರ್ಜುನನ ಅಶ್ವಮೇಧದ ಕುದುರೆ ಕಲ್ಲಿನ ಮೇಲೆ ನಿಂತಲ್ಲಿ ಶಾಪ ವಿಮೋಚನೆ ಎಂದು ಪರಿಹಾರ ಮಾರ್ಗ ನೀಡುವುದು.

ಇಷ್ಟು ಅಂಶಗಳು ಗದ್ಯಭಾಗದಲ್ಲಿ ಬರುವುದು ಉತ್ತಮ. ಹಾಗೆ ಉತ್ತಮ ಆರಂಭವಿರಬೇಕು ಅಂತೆಯೇ ಉತ್ತಮ ಮುಕ್ತಾಯವಿರಬೇಕು. ಇಡೀ ಕಥೆಯ ಆಶಯವು ಪ್ರತಿಬಿಂಬಿಸುವ ಶೀರ್ಷಿಕೆಯನ್ನು ಕೊಡುವುದು.

**ಚಟುವಟಿಕೆ-4**

**ಸೃಜನಾತ್ಮಕ ಬರವಣಿಗೆ**

**ಪಾಠ 'ಕಾಲಪುರುಷನ ಲೀಲೆ'**

ಉದ್ದೇಶ- ಯಕ್ಷಗಾನ ಪದ್ಯಕ್ಕೆ ಅರ್ಥ ಬರೆಯಿರಿ.

ಕಲಿಕಾ ಸಾಮಗ್ರಿಗಳು: ತಾಳಮದ್ದಳೆ ಯಕ್ಷಗಾನದ ಸಂಭಾಷಣೆಗಳ ಕ್ಲಿಪಿಂಗ್ ಗಳು. ಮಹಾಭಾರತದ ಕೊನೆಯ ಸ್ವರ್ಗಾರೋಹಣ ಸಂಧಿಯ ಗದ್ಯಭಾಗ.

ಅಧ್ಯಾಪಕರು ತರಗತಿ ಚಟುವಟಿಕೆಯನ್ನು ನಡೆಸುವ ಸಂದರ್ಭದಲ್ಲಿ ಸರಿಯಾದ ಪೂರ್ವ ತಯಾರಿಯ ಪ್ರಾಯೋಗಿಕ ನೆಲೆಯಲ್ಲಿ ಪಾಠ ಯೋಜನೆಯನ್ನು ಬರೆಯುವುದು.

ಪ್ರಕ್ರಿಯೆ: ಈ ರೀತಿಯಲ್ಲಿ ಮಾಡಬಹುದು.

ಕಾಲಪುರುಷನ ಲೀಲೆ ಪಾಠ ಭಾಗದ-

ಅನಕ ನಿಜ ಮನದೊಳಗೆ ವನಜಾಕ್ಷ ಯೋಚಿಸಿದ l ಎನಗಿದುವೆ ಕೊನೆಯ ರವಿಯುದಯ ll
ಅನುಗೊಳಿಸಬೇಕು ನರ ನಾಟಕಕೆ ಕೊನೆಯೆನುತ l ಕ್ಷಣದಿ ತರುಮೂಲದಲಿ ಕುಳಿತ ll

- ಕಾಲಪುರುಷರ ಲೀಲೆ ಪಾಠ ಭಾಗದ 'ಅನಕ ನಿಜ ಮನದೊಳಗೆ........... ತರಮೂಲದಲ್ಲಿ ಕುಳಿತ' ಭಾಗವನ್ನು ಮೌನವಾಗಿ ಓದಲು ವಿದ್ಯಾರ್ಥಿಗಳಿಗೆ ಸೂಚಿಸುವುದು.
- ಈ ಭಾಗವನ್ನು ಕೆಲವರಿಂದ ಗಟ್ಟಿಯಾಗಿ ಹಾಡಿಸುವುದು / ಓದಿಸುವುದು.
- ಪದ ವಿಂಗಡಣೆ ಮಾಡುವುದು.
- ನವೀನ ಪದಗಳಿಗೆ ಅರ್ಥ ಬರೆಯುವುದು.
- ಯಕ್ಷಗಾನ ಅರ್ಥಗಾರಿಕೆಯಲ್ಲಿ ಇರಬೇಕಾದ ಅಂಶಗಳ ಕುರಿತು ಚರ್ಚಿಸುವುದು.
  (ಕಥೆಯ ಹಿನ್ನೆಲೆ, ಸಂಭಾಷಣ ಶೈಲಿ, ಸ್ವಂತಿಕೆ, ವಿಶಿಷ್ಟ ಪದ ಪ್ರಯೋಗಗಳು ಇತ್ಯಾದಿ...)
- ಚರ್ಚೆಯಲ್ಲಿ ಮೂಡಿಬಂದ ಅಭಿಪ್ರಾಯಗಳ ಆಧಾರದಲ್ಲಿ ಯಕ್ಷಗಾನ ಶೈಲಿಯಲ್ಲಿ ಅರ್ಥ ಬರೆಯುವುದು.
- ಕೆಲವರಿಂದ ಮಂಡನೆ.
- ಅಧ್ಯಾಪಕರ ಸೂಕ್ತ ತಿದ್ದುಪಡಿಯೊಂದಿಗೆ ಅರ್ಥವನ್ನು ಪರಿಷ್ಕರಿಸುವುದು.
- ಯಕ್ಷಗಾನದ ಅರ್ಥಗಾರಿಕೆ ಶೈಲಿಯಲ್ಲಿ ಕೆಲವರಿಂದ ಮಂಡನೆ, ಅಧ್ಯಾಪಕರು ವಿದ್ಯಾರ್ಥಿಗಳಲ್ಲಿ ಯಾರಾದರೂ ಒಬ್ಬರು ಪದ್ಯವನ್ನು ಯಕ್ಷಗಾನ ಧಾಟಿಯಲ್ಲಿ ಹಾಡುವಂತೆ ಹೇಳುವುದು.

ಪದ್ಯದ ಕೆಲವು ಪದ, ಪದ ಸಮೂಹಗಳನ್ನು ಹೇಗೆ ವಿಸ್ತರಿಸಬಹುದು?

ಉದಾ:- 'ವನಜಾಕ್ಷ ಯೋಚಿಸಿದ....' ಅಂದರೆ ಏನು? ಶ್ರೀಕೃಷ್ಣ ಮನಸ್ಸಿನಲ್ಲಿ ಯೋಚಿಸಿದ ವಿಚಾರ ಎಂದಾಗಿದೆ.

ಉದಾ:- "ಶ್ರೀಮನ್ ನಾರಾಯಣನಾದ ನಾನು ದುಷ್ಟ, ಶಿಷ್ಟರ ರಕ್ಷೆ ಮಾಡುವುದಕ್ಕಾಗಿ ವಸುದೇವ-ದೇವಕಿ ದಂಪತಿಗಳಿಗೆ ಮಗನಾಗಿ ಈ ಪೃಥ್ವಿಯಲ್ಲಿ ಮನುಷ್ಯ ರೂಪದಲ್ಲಿ ಅವತರಿಸಿದೆ. ಕಂಸ, ಪೂತನಿ, ಮಾಗಧ, ಶಿಶುಪಾಲ, ದಂತವಕ್ರ ಮೊದಲಾದ ದುಷ್ಟರನ್ನು; ದುರಳರಾದ ಕೌರವಾದಿಗಳನ್ನು ಸದೆಬಡಿಯುವ ಮೂಲಕ ನನ್ನ ಜನ್ಮದ ಉದ್ದೇಶವಾದ ಭೂಭಾರವನ್ನು ಕಡಿಮೆ ಮಾಡಿದ್ದೇನೆ.

ಹಾಗಾದರೆ ಮುಂದೇನು? ಹೀಗೆ ನರ ನಾಟಕಕೆ ಕೊನೆಯೆನುತ......" ಎನ್ನುವ ಮಾತುಗಳನ್ನು ವಿಸ್ತರಿಸಬೇಕು.